# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seechnkodagu@cescmysore.org


ಸಂಖ್ಯೆ: ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2018-19/ ಲೆಕ್ಕ. 173 ದಿನಾಂಕ:15.11.2018
ಲಗತ್ತು:

## ಸಭೆಯ ನಡಾವಳಿಗಳು

ದಿನಾಂಕ: 11-10-2018 ರಂದು ಗೋಣಿಕೊಪ್ಪ ಉಪ ವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾಮರಾಜನಗರಕೊಡಗುರವರ ನೇತೃತ್ವದಲ್ಲಿ ನಡೆದ ಜನ ಸಂಪರ್ಕ ಸಭೆಯಲ್ಲಿ ಗೋಣಿಕೊಪ್ಪ ಉಪ ವಿಭಾಗದ ವಿದ್ಯುತ್‌ಗ್ರಾಹಕರು ವಿದ್ಯುಚ್ಛಕ್ತಿಗೆ ಸಂಬಂಧಿಸಿ ನಿವೇದಿಸಿಕೊಂಡ ದೂರುಗಳು ಮತ್ತು ಅವುಗಳ ಇತ್ಯರ್ಥಕ್ಕೆಕೈಗೊಂಡ ಕ್ರಮಗಳ ವಿವರಗಳು ಕೆಳಕಂಡಂತಿವೆ.

ಸಭೆಯಲ್ಲಿ ಹಾಜರಿದ್ದವರು.

1. ಶ್ರೀ ಎಂ. ಪ್ರತಾಪ್ ಅಧೀಕ್ಷಕಇಂಜಿನಿಯರ್(ವಿ), ಚಾಮರಾಜನಗರ ಕೊಡಗು ವೃತ್ತ.
2. ಶ್ರೀ ಸೋಮಶೇಖರ್, ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಮಡಿಕೇರಿ ವಿಭಾಗ.
3. ಶ್ರೀಮತಿ ತಾರಾ, ಕಾರ್ಯನಿರ್ವಾಹಕಇಂಜಿನಿಯರ್(ಇಂ), ಕಾರ್ಯ ಮತ್ತು ಪಾಲನೆ ಚಾ.ನಗರ-ಕೊಡಗು ವೃತ್ತ,ಮೈಸೂರು
4. ಶ್ರೀ ಪಿ. ಎನ್. ದೇವಯ್ಯ, ಸ.ಕಾ.ನಿ.ಇಂ(ವಿ),ಮಡಿಕೇರಿ ವಿಭಾಗ,
5. ಶ್ರೀ ಯತೀಶ್ ಪ್ರಭಾರ ಲೆಕ್ಕಾಧಿಕಾರಿಗಳು, ಮಡಿಕೇರಿ ವಿಭಾಗ.
6. ಶ್ರೀ ಎಂ. ಅಂಕಯ್ಯ, ಸ.ಕಾ.ನಿ.ಇಂ(ವಿ), ಗೋಣಿಕೊಪ್ಪಲು.
7. ಶ್ರೀಮತಿ ಸಿ. ಹೆಚ್. ಸರಸ್ವತಿ, ಹಿರಿಯ ಸಹಾಯಕರು, ಅಂತರಿಕ ಪರಿಶೋಧನೆ ಮಡಿಕೇರಿ ವಿಭಾಗ.
8. ಶ್ರೀ ವಿ. ಪಿ. ಜಗದೀಶ್, ಪ್ರಭಾರ ಹಿರಿಯ ಸಹಾಯಕ, ಗೋಣಿಕೊಪ್ಪಲು.
9. ಶ್ರೀ ಎಸ್. ಆರ್. ಕೃಷ್ಣಕುಮಾರ್, ಕಿರಿಯಇಂಜಿನಿಯರ್, ಗೋಣಿಕೊಪ್ಪಲು ಶಾಖೆ.
10. ಶ್ರೀ ಎಂ. ಇ. ವಿಜಯ ಕುಮಾರ್, ಶಾಖಾಧಿಕಾರಿ, ಶ್ರೀಮಂಗಲ ಶಾಖೆ.
11. ಶ್ರೀ ಹೆಚ್. ಜಿ. ಮನುಕುಮಾರ್, ಪ್ರಭಾರ ಶಾಖಾಧಿಕಾರಿ, ಬಾಳೆಲೆ ಶಾಖೆ.

**ದಿನಾಂಕ: 11-10-2018 ರಂದು ಪಡೆದ ದೂರುಗಳ ವಿವರ:-**

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ತೆಗೆದುಕೊಂಡಕ್ರಮ. |
|---|---|---|---|
| 1 | ಶ್ರೀ ವಿ. ಜಿ. ಕರುಂಬಯ್ಯ, ಬಾಳೆಲೆ ಗ್ರಾಮ. | ★ಮಲ್ಲೂರು ಗ್ರಾಮದಿಂದ ಕಿಸ್ಸೂರಿಗೆ ಹೋಗುವ ವಿದ್ಯುತ್ ಸಂಪರ್ಕ ಮಾರ್ಗವು ತೋಟದ ಮಧ್ಯದಲ್ಲಿ ಹಾದು ಹೋಗಿದ್ದು ಆಗಾಗ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾಗುವುದರಿಂದ ಆ ಮಾರ್ಗವನ್ನು Re-Rooting ಮಾಡುವಂತೆ ತಿಳಿಸಿದರು.ಅಲ್ಲದೆ ವಿದ್ಯುತ್ ಮಾರ್ಗವನ್ನು ಸೂಕ್ತವಾಗಿ ನಿರ್ವಹಿಸಲು ಮಾರ್ಗದಾಳುಗಳಿಗೆ | ★ ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಈ ಕಾಮಗಾರಿಯನ್ನು ಆದಷ್ಟು ಬೇಗನೆ ಮುಗಿಸಿ ಕೊಡಬೇಕೆಂದು ಪ್ರಭಾರ ಶಾಖಾಧಿಕಾರಿ ಬಾಳೆಲೆ ಶಾಖೆ ರವರಿಗೆ ನಿರ್ದೇಶಿಸಿದರು. |

| | | | |
|---|---|---|---|
| | | ಕಟ್ಟುನಿಟ್ಟಾಗಿ ಸೂಚಿಸುವಂತೆ ತಿಳಿಸಿದರು. ಕಿಸ್ತೂರು ಮಲ್ಲೂರು Re-Rooting ಅನ್ನು ನವೆಂಬರ್-2018 ತಿಂಗಳ ಅಂತ್ಯದ ಒಳಗೆ ಮಾಡಿಕೊಡುವಂತೆ ಕೋರಿದರು. | |
| 2 | ಶ್ರೀ ಎಂ. ಸಿ. ಕರುಂಬಯ್ಯ, ಮುಗುಟಗೇರಿ, ಪೊನ್ನಂಪೇಟೆ. 9591863339 | ★ಇವರ ಸ್ಥಾವರದ ಸಂಖ್ಯೆ GKGL33478ಕ್ಕೆ ಜಾಗೃತ ದಳದವರು ಅನಾವಶ್ಯಕವಾಗಿ ಹಿಂಬಾಕಿ ಬಿಲ್ಲು ವಿಧಿಸಿದ್ದು ಅದನ್ನು ಪರಿಶೀಲಿಸಿ ಸರಿಪಡಿಸುವಂತೆ ಕೋರಿದರು. | ★ಸ್ಥಳ ಪರಿಶೀಲನೆ ನಡೆಸಿ ಸೂಕ್ತ ವರದಿ ನೀಡುವಂತೆ ಗೋಣಿಕೊಪ್ಪಲು ಶಾಖಾಧಿಕಾರಿ ರವರಿಗೆ ಅಧೀಕ್ಷಕ ಇಂಜಿನಿಯರ್(ವಿ). ರವರು ಸೂಚಿಸಿದರು. |
| 3 | ಶ್ರೀ ಜಗದೀಶ್ ಮತ್ತು ಚಿಣ್ಣಪ್ಪ, ಮಾಯಮುಡಿ ಗ್ರಾಮ. 8762346153 | ★ಮಾಯಿಮುಡಿ ಗ್ರಾಮಕ್ಕೆ ಹೆಚ್ಚುವರಿ ಪರಿವರ್ತಕ ಮಂಜೂರಾಗಿದ್ದು ಅಳವಡಿಸುವ ಕೆಲಸ ಪೂರ್ಣಗೊಂಡಿರುವುದಿಲ್ಲ ಆದರಿಂದ ನವೆಂಬರ್ ತಿಂಗಳ ಒಳಗಡೆ ಸದರಿ ಕೆಲಸವನ್ನು ಪೂರ್ತಿ ಗೊಳಿಸುವಂತೆ ತಿಳಿಸಿರುತ್ತಾರೆ. | ★ ಸಹಾಯಕ ಕಾರ್ಯನಿರ್ವಾ ಇಂಜಿನಿಯರ್(ವಿ). ರವರು ಮಾತನಾಡಿ ಮಂಜೂರಾದ ಪರಿವರ್ತಕವನ್ನು ಅಳವಡಿಸುವಂತೆ ಶಾಖಾಧಿಕಾರಿ ಗೋಣಿಕೊಪ್ಪಲು ಶಾಖೆ ರವರಿಗೆ ಸೂಚಿಸಿದರು. |
| 4 | ಶ್ರೀ ಪಿ. ಬಿ. ಸೋಮಯ್ಯ, ಕಿರುಗೂರು ಗ್ರಾಮ. 8197650888 | ★ಬಾಳೆಲೆ ಶಾಖಾ ವ್ಯಾಪ್ತಿಯ ಕಾಫಿ ತೋಟದಲ್ಲಿ ಎಲ್. ಟಿ. ಮಾರ್ಗದ ವೈಯರ್ ಗಳು ಕಾಫಿಗಿಡದ ಮೇಲೆ ಬಿದ್ದಿರುತ್ತದೆ. ಇದರಿಂದ ಕಾರ್ಮಿಕರಿಗೆ ಕೆಲಸಮಾಡಲು ತೊಂದರೆಆಗುತ್ತಿದ್ದು ಕೂಡಲೇ ಸರಿಪಡಿಸುವಂತೆ ಅಗ್ರಹಿಸಿದರು. | ★ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಅಧೀಕ್ಷಕಇಂಜಿನಿಯರ್(ವಿ). ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 5 | ಶ್ರೀ ಎ. ಟಿ. ದಿನೇಶ್, ದೇವನೂರು ಗ್ರಾಮ, 9535534435 | ★ರಾಜಪುರ ದೇವನೂರು ಗ್ರಾಮಕ್ಕೆ ಅಳವಡಿಸಿರುವ 63 ಕೆ. ವಿ. ಎ. ಪರಿವರ್ತಕವು ಕಾಡಿನ ಮಧ್ಯದಲ್ಲಿದ್ದು ಮಳೆಗಾಲದಲ್ಲಿ ಹೊಳೆ ತುಂಬುವುದರಿಂದ ಮತ್ತು ಕಾಡಿನಲ್ಲಿ ಆನೆ ಮತ್ತು ಹುಲಿ ಉಪಟಳ ಇರುವುದರಿಂದ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾದಾಗ ಸರಿಪಡಿಸಲು ತೊಂದರೆ ಯಾಗುವುದರಿಂದ ಸದರಿ ಪರಿವರ್ತಕ ಮತ್ತು 11 ಕೆ. ವಿ. ಮಾರ್ಗವನ್ನು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸುವಂತೆ ಕೇಳಿಕೊಂಡರು. | ★ ಈ ಬಗ್ಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸ.ಕಾ.ನಿ.ಇಂ(ವಿ). ರವರಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು. |
| 6 | ಬಾಳೆಲೆ ಗ್ರಾಮಸ್ಥರು. | ★ಪೊನ್ನಂಪೇಟೆ ಎಂ.ಯು.ಎಸ್.ಎಸ್. ನಿಂದ ಬಾಳೆಲೆಗೆ ನೂತನವಾಗಿ ಅಳವಡಿಸುತ್ತಿರುವ ಎಕ್ಸ್‌ಪ್ರೆಸ್ ಫೀಡರ್‌ನ ಕಾಮಗಾರಿಯು ತುಂಬಾ ನಿಧಾನವಾಗಿ ನಡೆಯುತ್ತಿದ್ದು ಕಾಮಗಾರಿಗಾಗಿ ವಿದ್ಯುತ್ ನಿಲುಗಡೆ ಮಾಡುತ್ತಿರುವುದರಿಂದ ತುಂಬಾ ತೊಂದರೆ ಯಾಗುತ್ತಿರುವುದಾಗಿ ಬಾಳೆಲೆ ಗ್ರಾಮಸ್ಥರು ಒಟ್ಟಾಗಿ ತೀವ್ರ ಆಕ್ರೋಶ ವ್ಯಕ್ತಪಡಿಸಿ ತುರ್ತಾಗಿ ಕೆಲಸ ಪೂರ್ಣಗೊಳಿಸುವಂತೆ ಆಗ್ರಹಿಸಿದರು. ಹಾಗೂ ಕೆಲಸ ಪೂರ್ಣಗೊಳ್ಳುವ ಬಗ್ಗೆ ಗಡುವನ್ನು ನಿರ್ಧರಿಸುವಂತೆ ಆಗ್ರಹಿಸಿದರು. | ★ಸ.ಕಾ.ನಿ.ಇಂ(ವಿ). ರವರು ಇನ್ನು 4 ಕಿಲೋಮಿಟರ್ ಕಾಮಗಾರಿ ಮಾತ್ರ ಬಾಕಿ ಇದ್ದು ನವೆಂಬರ್-2018 ತಿಂಗಳಲ್ಲಿ ಕೆಲಸ ಪೂರ್ಣಗೊಳಿಸಿ ಕೊಡುವುದಾಗಿ ತಿಳಿಸಿದರು. |
| 7 | ಶ್ರೀ ರಾಜೀವ್ ಬೋಪಯ್ಯ, ಕಾನೂರು ಗ್ರಾಮ. | ★ಇಲಾಖೆಯ ಕಾರ್ಯ ವೈಫಲ್ಯದ ಬಗ್ಗೆ ಹಾಗೂ ನಿಯಮಗಳ ಪಾಲನೆ ಆಗದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಅವುಗಳ ಪಟ್ಟಿಯನ್ನು ನೀಡಿದರು. | |

| | | | |
|---|---|---|---|
| | | 1. ವಿದ್ಯುತ್ ಮಾರ್ಗವನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ ಪರಿವರ್ತಕವನ್ನು ನಿಯಮದಂತೆ ನಿರ್ವಹಣೆ ಮಾಡಿರುವುದಿಲ್ಲ<br>.<br><br>2. ವಿದ್ಯುತ್ ಕಂಬಗಳನ್ನು ಅಳವಡಿಸುವಾಗ ನಿಯಮದಂತೆ ಸರಿಯಾದ ಆಳತೆಯ ಗುಂಡಿತೆಗೆದು ನೆಡದೆ ಇರುವುದರಿಂದ ಮಳೆಗಾಲದಲ್ಲಿ ಕಂಬಗಳು ಹೆಚ್ಚಿನ ಪ್ರಮಾಣದಲ್ಲಿ ಬೀಳುತ್ತಿರುತ್ತದೆ.<br><br>3.ಗ್ರಾಹಕರ ಕುಂದು ಕೊರತೆ ಸಭೆ ಎಷ್ಟು ಅವದಿಗೊಮ್ಮೆ ನಡೆಯಬೇಕು ಎಂಬುವುದರ ಬಗ್ಗೆ ಮಾಹಿತಿ ನೀಡುವಂತೆ ತಿಳಿಸಿದರು.<br><br>4. ಕುಂದು ಕೊರತೆ ಸಭೆಯ ಮಾಹಿತಿಯು ಗ್ರಾಹಕರಿಗೆ ಸರಿಯಾಗಿ ಮಾಹಿತಿ ನೀಡದೆ ಇರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಮುಂದಿನ ಸಭೆಯ ವೇಳೆಗೆ ಮುಂಚಿತವಾಗಿ ಮಾಧ್ಯಮಗಳ ಮೂಲಕ ಪ್ರಚಾರ ಪಡಿಸುವಂತೆ ತಿಳಿಸಿದರು. | ★ಎಲ್ಲಾ ಶಾಖಾಧಿಕಾರಿಗಳಿಗೆ ವಿದುತ್ ಮಾರ್ಗ ಮತ್ತು ಸರಿಯಾದ ಸಮಯಕ್ಕೆ ನಿರ್ವಹಣೆ ಮಾಡುವಂತೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು.<br>★ ಅಧೀಕ್ಷಕ ಇಂಜಿನಿಯರ್(ವಿ). ರವರು ಮಾತನಾಡಿ ಎಲ್ಲಾ ಶಾಖಾಧಿಕಾರಿಗಳಿಗೆ ಕಾಮಗಾರಿಯು ಪೂರ್ಣಗೊಂಡ ನಂತರ ಸ್ಥಳ ಪರಿಶೀಲನೆ ಮಾಡಬೇಕೆಂದು ಸೂಚಿಸಿದರು.<br><br>★ ಗ್ರಾಹಕರ ಕುಂದು ಕೊರತೆ ಸಭೆ 3 ತಿಂಗಳಿಗೊಮ್ಮೆ ನಡೆಸುವುದಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಗೆ ತಿಳಿಸಿದರು.<br><br>★ಮುಂದಿನ ಸಭೆಗೆ ಮುಂಚಿತವಾಗಿ ಮಾಹಿತಿಯನ್ನು ಮಾಧ್ಯಮಗಳ ಮೂಲಕ ತಿಳಿಯ ಪಡಿಸುವುದಾಗಿ ಅಧೀಕ್ಷಕ ಇಂಜಿನಿಯರ್(ವಿ). ರವರು ಸಭೆಗೆ ತಿಳಿಸಿದರು. |
| 8 | ಶ್ರೀ ಸಿ. ಟಿ. ನಾಣಯ್ಯ, ಕಾನೂರು ಗ್ರಾಮ. | ★ಇವರಿಗೆ ಸಂಪರ್ಕ ಕಲ್ಪಿಸಿರುವ ಪರಿವರ್ತಕವು 1989 ರಲ್ಲಿ ಅಳವಡಿಸಲಾಗಿದ್ದು ಹಳೆಯದಾಗಿರುತ್ತದೆ. ಪರಿವರ್ತಕವನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿರುವುದಿಲ್ಲ ಪರಿವರ್ತಕಕ್ಕೆ ಎಲ್. ಟಿ. ಕಿಟ್ ಇರುವುದಿಲ್ಲ ಕೇಬಲ್ ಇರುವುದಿಲ್ಲ ಅರ್ಥಿಂಗ್ ಸಹ ಇರುವುದಿಲ್ಲ ಆದರಿಂದ ಓಲ್ಟೇಜ್ ಏರು ಪೇರು ಆಗುತ್ತಿದ್ದು ಒಂದು ಫೇಸ್ ನಲ್ಲಿ ಹೆಚ್ಚುವರಿ ಓಲ್ಟೇಜ್ ಬರುತ್ತಿದ್ದು ಹಲವಾರು ಸಮಯದಿಂದ ಈ ತೊಂದರೆ ಇದ್ದರೂ ಸರಿಪಡಿಸದೇ ಇರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. | ★ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ಮಾತನಾಡಿ ಸ್ಥಳ ಪರಿಶೀಲನೆ ನಡೆಸಿ ಪರಿವರ್ತಕವನ್ನು. ಬದಲಾಯಿಸಲು ಪ್ರಭಾರ ಶಾಖಾಧಿಕಾರಿ ಬಾಳೆಲೆ ಶಾಖೆ ರವರಿಗೆ ಸೂಚಿಸಿದರು. |
| 9 | ಶ್ರೀ ನಾಗರಾಜು<br>ಗೋಣಿಕೊಪ್ಪಲು,<br>9448585709 | ★ಗೋಣಿಕೊಪ್ಪಲು 1ನೇ ವಿಭಾಗದಲ್ಲಿರುವ ಮನೆಯ ಹತ್ತಿರ ವಿದ್ಯುತ್ ಮಾರ್ಗವು ಮರಕ್ಕೆ ತಗುಲುತ್ತಿದ್ದು ಮರವನ್ನು ಕಡಿಯಬೇಕೆಂದು ತಿಳಿಸಿದರು. | ★ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ ಅದಷ್ಟು ಬೇಗನೆ ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಶಾಖಾಧಿಕಾರಿ ಗೋಣಿಕೊಪ್ಪಲು ಶಾಖೆ ರವರಿಗೆ ತಿಳಿಸಿದರು. |
| 10 | ಶ್ರೀ ಐ.ಕೆ. ಬಿದ್ದಪ್ಪ,<br>ಗೋಣಿಕೊಪ್ಪಲು. | ★ಅರುವತ್ತೋಕ್ಲು ಮೈಸೂರಮ್ಮ ನಗರದಲ್ಲಿ ಎಲ್. ಟಿ. ವಯರ್ ಜೋತು ಬಿದ್ದಿದ್ದು ಅಪಾಯಕಾರಿ | ★ ಈ ಬಗ್ಗೆ ಮಾತನಾಡಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) |

| | | | |
|---|---|---|---|
| | | ಯಾಗಿರುವುದರಿಂದ ಕೂಡಲೇ ಸರಿಪಡಿಸಬೇಕೆಂದು ತಿಳಿಸಿದರು<br><br>★ಸದರಿಯವರ ಕೋಣಂಗೇರಿ ಗ್ರಾಮದಲ್ಲಿ ಇರುವ ಇವರ ಮನೆಗೆ ಅಳವಡಿಸಿರುವ ವಿದ್ಯುತ್ ಕಂಬಗಳು ತುಂಬಾ ಅಂತರವಿದ್ದು ವೈಯರ್ ಗಳು ಜೋತು ಬಿದ್ದಿರುವುದರಿಂದ ಎರಡು ಮಧ್ಯಂತರ ಕಂಬಗಳನ್ನು ಅಳವಡಿಸುವಂತೆ ಕೋರಿದರು.<br><br>★ಸದರಿಯವರು ಡಿ. ಸಿದ್ದರಾಜು ಯಂತ್ರಕರ್ಮಿ ದರ್ಜೆ-2 ಅನುಚಿತವಾಗಿ ವರ್ತಿಸಿರುವುದರಿಂದ ಅವರನ್ನು ವರ್ಗಾವಣೆ ಮಾಡುವಂತೆ ತಿಳಿಸಿದರು. | ರವರು ಅದಷ್ಟು ಬೇಗನೆ ಮಧ್ಯಂತರ ಕಂಬವನ್ನು ಅಳವಡಿಸಲು ಶಾಖಾಧಿಕಾರಿ ಗೋಣಿಕೊಪ್ಪಲು ಶಾಖೆ ರವರಿಗೆ ತಿಳಿಸಿದರು.<br><br>★ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ಮಾತನಾಡಿ ಮಧ್ಯಂತರ ಕಂಬಗಳನ್ನು ಅಳವಡಿಸಿ ಕೊಡಬೇಕಾಗಿ ಶಾಖಾಧಿಕಾರಿ ಶ್ರೀಮಂಗಲ ಶಾಖೆ ರವರಿಗೆ ಸೂಚಿಸಿದರು.<br><br>★ಅಧೀಕ್ಷಕ ಇಂಜಿನಿಯರ್(ವಿ). ರವರು ಮಾತನಾಡಿ ಸಹಾಯಕ ಕಾರ್ಯನಿವಾಹಕ ಇಂಜಿನಿಯರ್(ವಿ). ರವರಿಗೆ ಸದರಿ ನೌಕರನನ್ನು ಬೇರೆ ಕಡೆಗೆ ವರ್ಗಾವಣೆ ಮಾಡಲು ಸೂಚಿಸಿದರು. |
| 11 | ಶ್ರೀ ಸುಕೇಶ್ ಭೀಮಯ್ಯ, ಬಾಳೆಲೆ ಗ್ರಾಮ. | ★ಬಾಳೆಲೆ ಕೊಡವ ಸಮಾಜದಿಂದ ನಾರಿಮುನೀಶ್ವರ ದೇವಸ್ಥಾನದ ವರೆಗೆ ಮತ್ತು ದೇವನೂರು ಗ್ರಾಮದ ವರೆಗೆ ತೋಟದ ಮಧ್ಯದಲ್ಲಿ ಹಾದು ಹೋಗಿರುವ ವಿದ್ಯುತ್ ಮಾರ್ಗವನ್ನು ಬದಲಾಹಿಸಿ ಮುಖ್ಯ ರಸ್ತೆಯ ಮಾರ್ಗದಲ್ಲಿ Re-Rooting ಮಾಡುವಂತೆ ಅಗ್ರಹಿಸಿದರು. | ★ ಅಧೀಕ್ಷಕ ಇಂಜಿನಿಯರ್(ವಿ). ರವರು ಮಾತನಾಡಿ ಈ ಕಾಮಗಾರಿ ಅಂದಾಜು ಪಟ್ಟಿ ತಯಾರಿಸಿ ಅದಷ್ಟು ಬೇಗನೆ ಮುಗಿಸಿ ಕೊಡಬೇಕೆಂದು ಪ್ರಭಾರ ಶಾಖಾಧಿಕಾರಿ ಬಾಳೆಲೆ ಶಾಖೆ ರವರರಿಗೆ ಸೂಚಿಸಿದರು |
| 12 | ಮಾಯಮುಡಿ ಗ್ರಾಮಸ್ಥರು. 9449188257 | ★ಮಾಯಮುಡಿ ಗ್ರಾಮದ ಬಸಪ್ಪ ಕಾಲೋನಿ ರಸ್ತೆಯಲ್ಲಿ ಹಾದು ಹೋಗಿರುವ 11 ಕೆ. ವಿ. ಮಾರ್ಗಕ್ಕೆ ಪಿನ್ ಇನ್ಸುಲೇಟರ್ ಅಳವಡಿಸುವಂತೆ ಕೋರಿದರು. | ★ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು 11 ಕೆ. ವಿ. ಮಾರ್ಗಕ್ಕೆ ಪಿನ್ ಇನ್ಸುಲೇಟರ್ ಅಳವಡಿಸುವಂತೆ ಶಾಖಾಧಿಕಾರಿ ಗೋಣಿಕೊಪ್ಪಲು ಶಾಖೆ ರವರಿಗೆ ಸೂಚಿಸಿದರು. |
| 13 | ಶ್ರೀ ಉಪೇಂದ್ರ, ಹಾಗೂ ಗೋಣಿಕೊಪ್ಪಲು ಪಟ್ಟಣದ ಸಾರ್ವಜನಿಕರು. (7259377043) | ★ಗೋಣಿಕೊಪ್ಪಲು ಕಾರ್ಪೋರೇಷನ್ ಬ್ಯಾಂಕ್ ಮುಂಬಾಗದಲ್ಲಿ ಶ್ರೀ ಡಿ. ಸಿದ್ದರಾಜು ಯಂತ್ರಕರ್ಮಿ ದರ್ಜೆ-2 ರವರು ಇಲಾಖೆಯ ನಿಯಮಗಳನ್ನು ಉಲ್ಲಂಘಿಸಿ ಅನಧಿಕೃತವಾಗಿ ವಿದ್ಯುತ್ ಕಂಬವನ್ನು ಸ್ಥಳಾಂತರಿಸಿರುವ ಬಗ್ಗೆ ಗಮನ ಸೆಳೆದು ಅನಧಿಕೃತವಾಗಿ ಕೆಲಸ ನಿರ್ವಹಿಸಿರುವ ಬಗ್ಗೆ ಸದರಿ ನೌಕರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಗ್ರಹಿಸಿದರು. | ★ಈ ಬಗ್ಗೆ ಮಾತನಾಡಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ಸದರಿ ನೌಕರನಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗಿದ್ದು ನೌಕರರ ಸಮಜಾಯಿಸಿಕೆ ನಂತರ ಸೂಕ್ತ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು ಎಂದು ತಿಳಿಸಿದರು. |

| | | | |
|---|---|---|---|
| | | ★ಸ್ಥಳಿಯ ದಿನಪತ್ರಿಕೆಯಲ್ಲಿ ಶ್ರೀ ಡಿ. ಸಿದ್ದರಾಜು ರವರು ಅನಧಿಕೃತವಾಗಿ ವಿದ್ಯುತ್ ಕಂಬವನ್ನು ಸ್ಥಳಾಂತರಿಸಿರುವ ಬಗ್ಗೆ ಪ್ರಕಟವಾದ ವರದಿಯನ್ನು ಓದಿ ಸದರಿ ನೌಕರ ವಿರುದ್ಧ ಯಾವಕ್ರಮ ಕೈಗೊಳ್ಳಲಾಗಿದೆ ಹಾಗೂ ಕೂಡಲೆ ಅವರನ್ನು ಬೇರೆಡೆಗೆ ವರ್ಗಾವಣೆ ಮಾಡಬೇಕೆಂದು ಒತ್ತಾಯಿಸಿದರು. | ★ ಈ ಬಗ್ಗೆ ಮಾತನಾಡಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ಸದರಿ ನೌಕರನಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗಿದ್ದು ನೌಕರರ ಸಮಜಾಯಿಸಿಕೆ ನಂತರ ಸೂಕ್ತ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು ಎಂದು ತಿಳಿಸಿದರು. |
| 14 | ಶ್ರೀ ರಂಜನ್. ಬಾಳೆಲೆ ಗ್ರಾಮ. | ★ಸದರಿಯವರು ಹಿಂದಿನ ಸಭೆಯಲ್ಲಿ ಬಾಳೆಲೆ ಪ್ರಭಾರ ಶಾಖಾಧಿಕಾರಿಯಾಗಿ ಶ್ರೀ ಸೋಮೇಶ್ ಕೆ. ವಿ. ರವರ ವಿರುದ್ಧ ಮಾಡಲಾಗಿದ್ದ ಭ್ರಷ್ಟಚಾರದ ಆರೋಪಗಳಿಗೆ ಪೂರಕವಾದ ಸಾಕ್ಷ್ಯದಾರಗಳನ್ನು ಒದಗಿಸಲಾಗಿದ್ದರೂ ಯಾವುದೇ ಸೂಕ್ತ ಕ್ರಮ ಕೈಗೊಳ್ಳದ ಬಗ್ಗೆ ಆಕ್ಷೇಪ ವ್ಯಕ್ತ ಪಡಿಸಿ ಪ್ರಕರಣವು ಯಾವ ಹಂತದಲ್ಲಿದೆ ಎಂಬುದರ ಬಗ್ಗೆ ಮಾಹಿತಿ ನೀಡುವಂತೆ ಹಾಗೂ ಯಾವ ಕ್ರಮ ಕ್ರಮ ಕೈಗೊಂಡಿರುವುದರ ಬಗ್ಗೆ ಮಾಹಿತಿ ನೀಡುವಂತೆ ಅಗ್ರಹಿಸಿದರು. | ★ ಈ ಬಗ್ಗೆ ಮಾತನಾಡಿದ ಅಧೀಕ್ಷಕ ಇಂಜಿನಿಯರ್ ರವರು ಈ ಪ್ರಕರಣದ ತನಿಖೆಗಾಗಿ ತನಿಖಾಧಿಕಾರಿಯನ್ನು ನೇಮಿಸಲಾಗಿದ್ದು ತನಿಖೆಯು ಪ್ರಗತಿಯಲ್ಲಿದೆ ಎಂದು ತಿಳಿಸಿದರು. |

ಸಹಿ/- 15/11/18

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಗೋಣಿಕೊಪ್ಪ ಉಪವಿಭಾಗ ರವರ ಮಾಹಿತಿಗಾಗಿ.
7. ಹಿಆಸ/ಪ್ರಕ/ಕಡತ.